**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್.ಸಿ ರವರ ನ್ಯಾಯಾಲಯ, ಮಳವಳ್ಳಿ</u>**

<u>ಸಿಸಿ ನಂಃ **55/2017**</u>

**ಫಿರ್ಯಾದಿ : ಕರ್ನಾಟಕ ಸರ್ಕಾರ,**
**ಹಲಗೂರು ಪೋಲೀಸ್ ಠಾಣೆ** ಮುಖೇನ.

- ವಿರುದ್ದ -

**ಆರೋಪಿ : 1) ದೇವರಾಜು ಬಿನ್ ಚೆನ್ನಯ್ಯ**
ವಯಸ್ಸುಃ 34 ವರ್ಷ
**ವಾಸ:** 5 ನೇ ಕ್ರಾಸ್, ಅಂಬೇಡ್ಕರ್ ನಗರ,
ಸಾತನೂರು ರಸ್ತೆ, ಚನ್ನಪಟ್ಟಣ ಟೌನ್.

**<u>ಆರೋಪಣೆ</u>**

**ಮಾದೇಶ ವಿ., ಬಿ.ಎ.ಎಲ್., ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ., ಮಳವಳ್ಳಿ ಆದ ನಾನು, ಮೇಲ್ಕಂಡ ಆರೋಪಿಯಾದ ನಿಮ್ಮನ್ನು ಈ ಕೆಳಕಂಡಂತೆ ಆರೋಪಣೆಗೆ ಗುರಿಪಡಿಸುವುದೇನೆಂದರೆ**

ದಿನಾಂಕಃ 10.12.2015 ರಂದು ಸಂಜೆ 4-00 ಗಂಟೆ ಸಮಯದಲ್ಲಿ ಹಲಗೂರು ಪೋಲೀಸ್ ಠಾಣಾ ಸರಹದ್ದಿನ ಚಾಸಾ 1ರವರ ಮನೆಯ ಮುಂದೆ ಚಾಸಾ 1 ಮತ್ತು 2ರವರು ಇದ್ದಾಗ ಆರೋಪಿಯಾದ ನೀವು ಚಾಸಾ 1ರವರ ಮನೆಯ ಬಳಿ ಬಂದು ಚಾಸಾ 2ರವರಿಗೆ ನನ್ನ ತಂದೆಗೆ ಹುಷಾರಿಲ್ಲ ನನ್ನ ಮಕ್ಕಳನ್ನು ಕಳುಹಿಸಿಕೊಡು ಎಂದು ಕೇಳಿದ್ದಕ್ಕೆ ಚಾಸಾ 2ರವರು ನೀವು ಜಗಳ ಮಾಡುತ್ತೀರಿ ಈಗ ಕಳುಹಿಸುವುದಿಲ್ಲ. ನಿಮ್ಮ ಅಣ್ಣ, ತಾಯಿ ಯಾರಾದರೂ ಬರಲಿ ಎಂದು ಹೇಳಿದ್ದಕ್ಕೆ ಆರೋಪಿಯಾದ ನೀವು ಚಾಸಾ 2ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಅವಮಾನಿಸಿ, ಆ ಮೂಲಕ ಐಪಿಸಿ ಕಲಂ 504 ರೀತ್ಯಾ ಈ ನ್ಯಾಯಾಲಯದ ಸಂಜ್ಞಾನದ ವ್ಯಾಪ್ತಿಯೊಳಗೆ ಶಿಕ್ಷಾರ್ಹ ಅಪರಾದ ಎಸಗಿದ್ದೀರಿ ಎಂದು ನಿಮ್ಮ ವಿರುದ್ದ ಆಪಾದಿಸಿದೆ.

**ಉತ್ತರಃ ಆರೋಪಿ**

ಮೇಲ್ಕಂಡ ದಿನಾಂಕ, ಸ್ಥಳ, ಸಮಯದಲ್ಲಿ ಆರೋಪಿಯಾದ ನೀವು ಚಾಸಾ 2ರವರಿಗೆ ಕೈಯಿಂದ ಹೊಡೆಯಲು ಹೋಗಿದ್ದು, ಆ ಸಂದರ್ಭ ಜಗಳ ಬಿಡಿಸಲು ಬಂದ ಚಾಸಾ

1ರವರಿಗೆ ಬಲಗಾಲಿನ ಹತ್ತಿರ ಹೊಡೆದು ನೋವು ಮಾಡಿ ಆ ಮೂಲಕ ಐಪಿಸಿ ಕಲಂ 324 ರ ರೀತ್ಯಾ ಈ ನ್ಯಾಯಾಲಯದ ಸಂಜ್ಞಾನದ ವ್ಯಾಪ್ತಿಯೊಳಗೆ ಶಿಕ್ಷಾರ್ಹ ಅಪರಾದ ಎಸಗಿದ್ದೀರಿ ಎಂದು ನಿಮ್ಮ ವಿರುದ್ದ ಆಪಾದಿಸಿದೆ.

**ಉತ್ತರಃ ಆರೋಪಿ**

ಮೇಲ್ಕಂಡ ದಿನಾಂಕ, ಸ್ಥಳ, ಸಮಯದಲ್ಲಿ ಚಾಸಾ 1ರವರು ಚಾಸಾ 2ರವರಿಗೆ ಏಕೆ ಹೊಡೆಯುತ್ತೀರಿ ಎಂದು ಜಗಳ ಬಿಡಿಸಲು ಹೋದಾಗ ಮನೆಯ ಮುಂದೆ ಅಲ್ಲೇ ಬಿದ್ದಿದ್ದ ಒಂದು ಕಲ್ಲನ್ನು ಆರೋಪಿಯಾದ ನೀವು ತೆಗೆದುಕೊಂಡು ಚಾಸಾ 1ರವರಿಗೆ ಬಲಗಾಲಿನ ಹತ್ತಿರ ಹೊಡೆದು ನೋವು ಮಾಡಿ ಚಾಸಾ 1ರವರಿಗೆ ತೀವ್ರ ಸ್ವರೂಪದ ಗಾಯ ಉಂಟುಮಾಡಿದ್ದು, ಆ ಮೂಲಕ ಐಪಿಸಿ ಕಲಂ 326ರ ರೀತ್ಯಾ ಈ ನ್ಯಾಯಾಲಯದ ಸಂಜ್ಞಾನದ ವ್ಯಾಪ್ತಿಯೊಳಗೆ ಶಿಕ್ಷಾರ್ಹ ಅಪರಾದ ಎಸಗಿದ್ದೀರಿ ಎಂದು ನಿಮ್ಮ ವಿರುದ್ದ ಆಪಾದಿಸಿದೆ.

**ಉತ್ತರಃ ಆರೋಪಿ**

ಪ್ರಶ್ನೆಃ 1. ಮೇಲೆ ಓದಿ ಹೇಳಿ ವಿವರಿಸಿದ ಆರೋಪಣೆಗಳು ಅರ್ಥವಾಯಿತೇ?

**ಉತ್ತರಃ ಆರೋಪಿ**

ಪ್ರಶ್ನೆ. 2. ಮೇಲ್ಕಂಡ ಆರೋಪಣೆಗಳನ್ನು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಬಯಸುತ್ತೀರೋ ?

**ಉತ್ತರಃ ಆರೋಪಿ**

(ದಿನಾಂಕ 18.12.2023 ರಂದು ಮೇಲ್ಕಂಡ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿ ಸರಿಯಾಗಿರುತ್ತದೆಂದು ಈ ಮೂಲಕ ದೃಢೀಕರಿಸುತ್ತೇನೆ.)

ಸಹಿ/-

(ಮಾದೇಶ ವಿ )

**ಹಿರಿಯ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ, ಮಳವಳ್ಳಿ.**